# ನ್ಯಾಷನಲ್ ಪಬ್ಲಿಕ್ ಶಾಲೆ

## ಕೆಂಗೇರಿ , ಬೆಂಗಳೂರು



### 65ನೇ  ಕರ್ನಾಟಕ ರಾಜ್ಯೋತ್ಸವದ ವರದಿ

ಕರ್ನಾಟಕ  ಬರಿ   ನಾಡಲ್ಲ
ನಮ್ಮ ಸಂಸ್ಕೃತಿಯ ಧಾತು
ಕನ್ನಡ  ಕೇವಲ  ನುಡಿಯಲ್ಲ
ನಮ್ಮಂತರಂಗದ   ಮಾತು

ಎಲ್ಲರಿಗೂ 65ನೇ ಕರ್ನಾಟಕ ರಾಜ್ಯೋತ್ಸವದ ಶುಭಾಶಯಗಳು.

ನ್ಯಾಷನಲ್ ಪಬ್ಲಿಕ್ ಶಾಲೆ, ಕೆಂಗೇರಿ, ಕುಟುಂಬದ ವತಿಯಿಂದ  **2020-21** ನೇ ಸಾಲಿನಲ್ಲಿ 65ನೇ  ಕರ್ನಾಟಕ /ಕನ್ನಡ ರಾಜ್ಯೋತ್ಸವವನ್ನು ಸಿರಿಗನ್ನಡ ವೈಭವ **ಶೀರ್ಷಿಕೆ** ಅಡಿಯಲ್ಲಿ ಸುಂದರವಾಗಿ ಆಚರಿಸಲಾಯಿತು.

ಈ ಕಾರ್ಯಕ್ರಮದಲ್ಲಿ ನಮ್ಮ ಶಾಲೆಯ ಕಾರ್ಯದರ್ಶಿಗಳಾದ ಶ್ರೀಮತಿ ದಿವ್ಯ. ಬಿ. ಎಸ್ ರವರು ಅಧ್ಯಕ್ಷತೆಯನ್ನು ವಹಿಸಿದ್ದರು. ಶಾಲೆಯ ಪ್ರಾಂಶುಪಾಲರಾದ ಶ್ರೀಮತಿ ಗೀತಾ ದೀಕ್ಷಿತ್ ರವರು ಕಾರ್ಯಕ್ರಮದ ಮುಂದಾಳತ್ವವನ್ನು ವಹಿಸಿದ್ದರು. ಶಾಲೆಯ ಸಹಸಂಯೋಜಕರಾದ ಶ್ರೀಮತಿ ಗೀತಾ. ಸಿ ರವರ ಸಹಕಾರದೊಂದಿಗೆ ಕರ್ನಾಟಕ ರಾಜ್ಯೋತ್ಸವವನ್ನು ವಸ್ತುತಃವಾಗಿ ಆಚರಿಸಲಾಯಿತು.

ಕರ್ನಾಟಕವನ್ನಾಳಿದ ಮೊದಲ ರಾಜವಂಶವಾದ ಕದಂಬರಿಂದ ಹಿಡಿದು ಪ್ರಸ್ತುತ ಮೈಸೂರು ಒಡೆಯರ ಆಳ್ವಿಕೆಯಡಿಯಲ್ಲಿ ಕರ್ನಾಟಕದಲ್ಲಿ ಕಲೆ, ವಾಸ್ತುಶಿಲ್ಪ, ಹಾಗು ಸಾಹಿತ್ಯ ಕ್ಷೇತ್ರಗಳಿಗೆ ರಾಜರು ನೀಡಿದ್ದ ಕೊಡುಗೆಗಳು ಹಾಗು ರಾಜ್ಯ ವಿ ಸ್ತರಣೆ ಈ ಎಲ್ಲಾ ಅಂಶಗಳ ಮೇಲೆ ಬೆಳಕು ಚೆಲ್ಲುವಂತೆ **"ಸಿರಿಗನ್ನಡ ವೈಭವ"** ಶೀರ್ಷಿಕೆಯಡಿ ಈ ವರ್ಷದ ಕರ್ನಾಟಕ ರಾಜ್ಯೋತ್ಸವ ಹಬ್ಬವನ್ನು ಎಲ್ಲರೂ ಕಣ್ತುಂಬಿಕೊಂಡೆವು.

ಮೊದಲಿಗೆ ಪ್ರಾರ್ಥನಾ ಗೀತೆಯೊಂದಿಗೆ ಕಾರ್ಯಕ್ರಮ ಪ್ರಾರಂಭವಾಯಿತು. ನಂತರ ಏಕಪಾತ್ರಾಭಿನಯ, ಹಾಡು, ನೃತ್ಯ ಮೈಸೂರು ದಸರಾ, ಪ್ರಮುಖ ರಾಜರ ಸ್ವಯಂ ಘೋಷಣೆ, ತಬಲ ವಾದನ , ಭಾಷಣ, ಕರ್ನಾಟಕ ಶಿಲ್ಪಕಲೆಗಳ ಕಿರುನೋಟ ಇತ್ಯಾದಿ ಕಾರ್ಯಕ್ರಮಗಳು ರಾಜ್ಯೋತ್ಸವ ಕಾರ್ಯಕ್ರಮಕ್ಕೆ ವಿಶೇಷ ರಂಗು ಮೂಡಿಸಿದ್ದವು. ನಮ್ಮ ಪ್ರಾಂಶುಪಾಲರ ಕನ್ನಡ ಹಿತನುಡಿಗಳು ಅನಿರೀಕ್ಷಿತ ಹಾಗು ಅದ್ಭುತವಾಗಿದ್ದವು.

ಹೀಗೆ ಎಲ್ಲರ ಪ್ರೋತ್ಸಾಹ ಹಾಗು ಸಹಕಾರದೊಂದಿಗೆ ಕಾರ್ಯಕ್ರಮವು ತುಂಬಾ ಅಚ್ಚುಕಟ್ಟಾಗಿ ಮೂಡಿ ಬಂದಿತು.

**ಸಿರಿಗನ್ನಡಂ ಗೆಲ್ಗೆ , ಸಿರಿಗನ್ನಡಂ ಬಾಳ್ಗೆ...**



*******ಧನ್ಯವಾದಗಳು*******






YAMAHA
PSR I455










